ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/19/ಇಎಸ್‌ಟಿ(10) 2015, ಭಾಗ-2 1583

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 04-06-2016.

## ಸುತ್ತೋಲೆ

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿಗಳನ್ನು ಬಿಡುವು ರಹಿತ ಸಿಬ್ಬಂದಿಗಳೆಂದು ಪರಿಗಣಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ: 300 ಡಿಟಿಇ 2012, ದಿ: 22-12-2014.
2. ನಿರ್ದೇಶನಾಲಯದ ಹಿಂಬರಹ ಪತ್ರ ಸಂಖ್ಯೆ: ಡಿಟಿಇ 31 ಇಎಸ್‌ಟಿ 8(ಬಿ) 2012, ದಿನಾಂಕ: 03-01-2015.
3. ಸಕಾರದ ಪತ್ರ ಸಂಖ್ಯೆ: ಇಡಿ 300 ಡಿಟಿಇ 2012, ದಿ: 02-05-2015.
4. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಟಿಇ 31 ಇಎಸ್‌ಟಿ 8(ಬಿ) 2011, ದಿನಾಂಕ: 15-05-2015.
5. ಎಲ್ಲಾ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳ ಪ್ರಸ್ತಾವನೆಗಳು.

***-***

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ವರ್ಗದವರನ್ನು ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಾಮಗಳ ನಿಯಮ 113ರಡಿಯಲ್ಲಿ ಕಲ್ಪಿತವಾಗಿರುವ ಅವಕಾಶಗಳನ್ವಯ ಪರಿಶೀಲಿಸಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರು ಮತ್ತು ಪ್ರಾಂಶುಪಾಲರು ಸೂಚಿಸಿದ ವಿಭಾಗದ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರಲ್ಲಿ ಒಬ್ಬರ ಸೇವೆ ಅವಶ್ಯಕವೆಂದು ಕಂಡುಬಂದಲ್ಲಿ, ಅವರನ್ನು ಆಡಳಿತ ಹಿತದೃಷ್ಟಿಯಿಂದ ಬಿಡುವು ರಹಿತ ಸಿಬ್ಬಂದಿ ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪರಿಗಣಿಸಿ ಆದೇಶಿಸಿದೆ. ಸದರಿ ಆದೇಶವನ್ನು ಪೂರ್ವಾನ್ವಯವಾಗಿ ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ಸ್ಪಷ್ಟೀಕರಿಸಲಾಗಿದೆ.

ಸಂಸ್ಥೆಯಲ್ಲಿ ರಜೆ ಅವಧಿಯನ್ನು ಬಳಸಿಕೊಳ್ಳದೇ ಪ್ರಾಂಶುಪಾಲರಿಂದ ನಾಮ ನಿರ್ದೇಶನಗೊಂಡು ಕಾರ್ಯನಿರ್ವಹಿಸುತ್ತಿರುವ ವಿಭಾಗದ ಹಿರಿಯ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರನ್ನು ಬಿಡುವು ರಹಿತ ಸಿಬ್ಬಂದಿಯೆಂದು ಪರಿಗಣಿಸಿ, ಅನುಮೋದಿಸಬೇಕೆಂದು ಕೋರಿ ಉಲ್ಲೇಖ(5)ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತೀರಿ.

ತಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಪ್ರಸ್ತಾವನೆಗಳಲ್ಲಿ ಸರ್ಕಾರದ ಆದೇಶದ ದಿನಾಂಕದಿಂದ ಹೊರತು ಪಡಿಸಿ ಸದರಿ ಸಿಬ್ಬಂದಿಯವರು ಸಂಸ್ಥೆಯಲ್ಲಿ ಕಾರ್ಯವರದಿ ಮಾಡಿಕೊಂಡ ದಿನಾಂಕದಿಂದ ಅನುಮೋದನೆ ಕೋರಿರುತ್ತೀರಿ / ಒಂದು ವಿಭಾಗಕ್ಕೆ ಇಬ್ಬರನ್ನು ನೇಮಿಸಿ ಕೊಂಡಿರುತ್ತೀರಿ / ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಕಾರ್ಯನಿರ್ವಹಿಸಿದ ರಜಾ ಅವದಿ ಸ್ಪಷ್ಟವಾಗಿ ನಮೂದಿಸಿರುವುದಿಲ್ಲ / ವಿಭಾಗದಲ್ಲಿ ಹಿರಿಯರ ಬದಲಾಗಿ ಅವರ ನಂತರದ ಸಿಬ್ಬಂದಿಯನ್ನು ನಾಮನಿರ್ದೇಶನ ಗೊಳಿಸಿರುವುದಕ್ಕೆ ಸೂಕ್ತ ವಿವರಣೆ ನೀಡಲಾಗಿರುವುದಿಲ್ಲ.

...2

ಆದುದರಿಂದ ಸಂಸ್ಥೆಯಲ್ಲಿ ಪ್ರಾಂಶುಪಾಲರಿಂದ ನಾಮನಿರ್ದೇಶನಗೊಂಡ ವಿಭಾಗದ ಹಿರಿಯ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರಲ್ಲಿ ಒಬ್ಬರು ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ರಜೆ ಅವಧಿಯನ್ನು ಬಳಸಿಕೊಳ್ಳದೇ ಕಾರ್ಯನಿರ್ವಹಿಸಿದ ವಿವರವನ್ನು ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ಅನುಬಂಧದಲ್ಲಿ ಮಾಹಿತಿಯನ್ನು ನಮೂದಿಸಿ ಸಲ್ಲಿಸಿದಲ್ಲಿ ಪ್ರಸ್ತಾವನೆ ಪರಿಶೀಲಿಸಲಾಗುವುದು.

| ಕ್ರ. ಸಂ | ಹೆಸರು ಮತ್ತು ಪದನಾಮ. ಶ್ರೀ/ಶ್ರೀಮತಿ | ವಿಭಾಗ | ಕಾರ್ಯನಿರ್ವಹಿಸಿದ ರಜಾ ಅವಧಿ (ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ರಜೆ ಅವದಿ | | | ಷರಾ |
|---|---|---|---|---|---|---|
| | | | ಶೈಕ್ಷಣಿಕ ವರ್ಷ | ಸಮ ಸೆಮಿಸ್ಟರ್ ದಿ:.....ರಿಂದ ದಿ:.....ರ ವರೆಗೆ | ಬೆಸ ಸೆಮಿಸ್ಟರ್ ದಿ:.....ರಿಂದ ದಿ:.....ರ ವರೆಗೆ | |
| (1) | (2) | (3) | (4) | (5) | (6) | (7) |
| | | | | | | |
| | | | | | | |
| | | | | | | |
| | | | | | | |

ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ

ನಿರ್ದೇಶಕರು

ಗೆ,

ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ. ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:-

1. ಆಡಳಿತಾಧಿಕಾರಿ. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
2. ಇ-ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.
3. ಇಎಸ್‌ಟಿ 8(ಬಿ) ವಿಭಾಗಕ್ಕೆ
4. ಕಛೇರಿ ಪ್ರತಿ.